ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಬೆಂಗಳೂರು ಜಲಮಂಡಳಿ ನೌಕರರ ವೇತನ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು):-

372 (599) ಮಾನ್ಯ ಉಪ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ಬಿ.ಡ.ಬ್ಲ್ಯೂ.ಎಸ್.ಎಸ್.ಬಿ) ಯಲ್ಲಿ ಹಾಲಿ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಜಾರಿಯಲ್ಲಿರುವ ಹುದ್ದೆಗಳು ಯಾವುವು ; (ಹುದ್ದೆವಾರು, ವೇತನ ಶ್ರೇಣಿವಾರು ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಮಂಡಳಿಯು ಒಂದು ಉದ್ಯಮವೇ; ಹಾಗಾದಲ್ಲಿ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ನೀಡುತ್ತಿರುವ ವೇತನ ಶ್ರೇಣಿ ಯಾವುದು; ರಾಜ್ಯ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯನ್ನು ಮಂಡಳಿ ನೌಕರರಿಗೆ ನೀಡದಿರಲು ಕಾರಣಗಳೇನು ;(ವಿವರವಾದ ಮಾಹಿತಿ ನೀಡುವುದು)

(ಇ) ಸರ್ಕಾರದ ಇತರೆ ನಿಗಮ ಮಂಡಳಿಗೆ ಹೋಲಿಸಿದಾಗ ಸದರಿ ಮಂಡಳಿಯ ನೌಕರರು ಅತಿ ಹೆಚ್ಚಿನ ವೇತನ ಪಡೆಯುತ್ತಿರಲು ಕಾರಣಗಳೇನು ? (ಸಂಪೂರ್ಣ ವಿವರವಾದ ಮಾಹಿತಿ ನೀಡುವುದು)